'ಬೈವಾಟರ್'ಗೆ ಕಾವೇರಿ ನೀರು ಸರಬರಾಜು ಯೋಜನೆ

3207- ಶ್ರೀ ಆರ್. ಅಶೋಕ್ (ಉತ್ತರ ಹಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಬೆಂಗಳೂರು ನಗರಕ್ಕೆ ನೀರು ಪೂರೈಸುವ ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ಎಂದು ವಹಿಸಿಕೊಡಲಾಗಿದೆ?*

ಆ. *ಈ ಕುರಿತು ಪರ್ಯಾಲೋಚಿಸಿ ಬೆಂಗಳೂರು ಜಲ ಮಂಡಳಿ ವರದಿ ನೀಡಿರುವುದು ನಿಜವೇ? (ವರದಿ ಬಗ್ಗೆ ವಿವರ ನೀಡುವುದು)*

ಇ. *ಈಗ ಮತ್ತೆ ಈ ಯೋಜನೆಯನ್ನು ಬೈವಾಟರ್‌ಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಈ. *ಈ ಹಿಂದೆ ಸದನದಲ್ಲಿ ಈ ಯೋಜನೆಗೆ ಸಂಬಂಧಪಟ್ಟಂತೆ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದರೂ ಮತ್ತೆ ಈ ಯೋಜನೆಗೆ ಅನುಮತಿ ನೀಡಿದ್ದ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಪರಿಶೀಲನೆಯಲ್ಲಿದೆ

ಆ) ಮೇಲಿನ 'ಅ' ಮತ್ತು 'ಆ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿದ್ಯುತ್ ನಿಗಮದಲ್ಲಿ ಭರ್ತಿ ಮಾಡಿಕೊಳ್ಳಲಾಗಿರುವ ಹುದ್ದೆಗಳು

3209 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿದ್ಯುತ್ ನಿಗಮದಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಎಂದಿನಿಂದ ಈ ಹುದ್ದೆಗಳು ಖಾಲಿ ಇವೆ?*

ಇ) *ಕಳೆದ ಎರಡು ವರ್ಷಗಳಲ್ಲಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಆ ಹುದ್ದೆಗಳು ಯಾವುವು?*

ಈ) *ಹೀಗೆ ಭರ್ತಿ ಮಾಡುವಾಗ ಯೋಜನಾ ಪ್ರದೇಶದ ಸಂತ್ರಸ್ತರ ಕುಟುಂಬಕ್ಕೆ ಕನಿಷ್ಟ ಒಬ್ಬರಿಗಾದರೂ ಆಯ್ಕೆ ಮಾಡಿಕೊಳ್ಳುವ ನಿಯಮವಿದೆಯೇ?*

ಉ) *ಈ ರೀತಿ 2 ವರ್ಷಗಳಲ್ಲಿ ಹುದ್ದೆ ಭರ್ತಿ ಮಾಡುವಾಗ ಶಿವಮೊಗ್ಗ ಜಿಲ್ಲೆಯ ಚಕ್ರಾ ಮತ್ತು ವರಾಹಿ ಸಂತ್ರಸ್ಥ ಕುಟುಂಬಗಳ ಜನರನ್ನು ಆಯ್ಕೆ ಮಾಡಲಾಗಿದೆಯೇ?*

ಊ) *ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಖಾಲಿ ಇರುವ ಹುದ್ದೆಗಳು

ಕಾರ್ಪೊರೇಟ್ - 199

ಕಾರ್ಮಿಕರು - 76

ಆ) ವಿವರಗಳನ್ನು ಅನುಬಂಧ ಎ1 ಮತ್ತು ಎ2 ಗಳಲ್ಲಿ ನೀಡಲಾಗಿದೆ.

ಇ) ಕಳೆದ 2 ವರ್ಷಗಳಲ್ಲಿ ಭರ್ತಿ ಮಾಡಲಾದ ಹುದ್ದೆಗಳು

ಕಾರ್ಪೊರೇಟ್ - 166

ಕಾರ್ಮಿಕರು - 234

ವಿವರಗಳನ್ನು ಅನುಬಂಧ ಬಿ1 ಮತ್ತು ಬಿ2 ಗಳಲ್ಲಿ ನೀಡಲಾಗಿದೆ .

ಈ) ಹೌದು. ಯಾರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಮುಳುಗಡೆಯಾಗಿರುತ್ತದೆಯೋ ಇತ್ಯಾದಿ ಇವರ ಕುಟುಂಬದ ಸದಸ್ಯರಲ್ಲಿ ಒಬ್ಬ ವ್ಯಕ್ತಿಗೆ ಮೀರದಂತೆ ನಿಗಮದಲ್ಲಿ ಉದ್ಯೋಗ ನೀಡುವಾಗ ಆದ್ಯತಾ ವರ್ಗದಡಿಯಲ್ಲಿ ನೇಮಕಾತಿಗೆ ಅರ್ಹರಿರುತ್ತಾರೆ. ಭೂ ಒಡೆತನ ಕಳೆದ ಕೊಂಡಂತಹ/ಸ್ಥಳಾಂತರಿಸಲ್ಪಟ್ಟಂತಹ ಅಥವಾ ಅವನ ಹೆಂಡತಿ ಅಥವಾ ಅವನ ಅವಲಂಬಿತ ಮಕ್ಕಳು ಪರಿಗಣಿಸಲು ಅರ್ಹರಿರುತ್ತಾರೆ.

ಉ) ಹೌದು.

ಕಾರ್ಪೊರೇಟ್ - 7

ಕಾರ್ಮಿಕರು - 2

ಹುದ್ದೆಗಳಿಗೆ ವರಾಹಿ ಭೂಸಂತ್ರಸ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಊ) ಉದ್ಭವಿಸುವುದಿಲ್ಲ.

ಅನುಬಂಧ ಎ1

ಕಾರ್ಪೊರೇಟ್ ವೃಂದ

ಖಾಲಿ ಹುದ್ದೆಗಳು - ಕಾರ್ಪೊರೇಟ್ ವೃಂದ ದಿನಾಂಕ: 30.9.2000 ರಲ್ಲಿದ್ದಂತೆ

ಕ್ರ. ಸಂ.	ಹುದ್ದೆಗಳು	ಬಾಹ್ಯ: ಆಂತರಿಕ ನೇಮಕಾತಿ	ಒಟ್ಟು	ಎಂದಿನಿಂದ ಖಾಲಿ ಇವೆ
1.	ಅಸಿಸ್ಟೆಂಟ್ ಕಂಪನಿ ಸೆಕ್ರೆಟರಿ	ಬಾಹ್ಯ ಅಭ್ಯರ್ಥಿ	1	1997
2.	ಅಸಿಸ್ಟೆಂಟ್ ಇಂಜಿನೀಯರ್(ಸಿವಿಲ್)	ಬಾಹ್ಯ ಅಭ್ಯರ್ಥಿ	184	1995-99ರ ಮಧ್ಯದಲ್ಲಿ
3.	ಅಸಿಸ್ಟೆಂಟ್ ಇಂಜಿನೀಯರ್ (ಎಲೆಕ್ಟ್ರಿಕಲ್)	ಬಾಹ್ಯ ಅಭ್ಯರ್ಥಿ	110	"

1	2	3	4	5	6
4.	ಅಸಿಸ್ಟೆಂಟ್ ಇಂಜಿನೀಯರ್ (ಮೆಕ್ಯಾನಿಕಲ್)	ಬಾಹ್ಯ	ಅಭ್ಯರ್ಥಿ	5	"
5.	ಅಸಿಸ್ಟೆಂಟ್ ಇಂಜಿನಿಯರ್ (ಇಲೆಕ್ಟ್ರಿಕಲ್: ಮೆಕ್ಯಾನಿಕಲ್) ಸಾಮಾನ್ಯ ಹುದ್ದೆ	ಬಾಹ್ಯ	ಅಭ್ಯರ್ಥಿ	19	"
6.	ಸಿಸ್ಪಮ್ ಅನಾಲಿಸ್ಟ್	ಬಾಹ್ಯ	ಅಭ್ಯರ್ಥಿ	4	"
7.	ಜಿಯಾಲಜಿಸ್ಟ್	ಬಾಹ್ಯ	ಅಭ್ಯರ್ಥಿ	4	"
8.	ಜೂನಿಯರ್ ಇಂಜಿನಿಯರ್ (ಸಿವಿಲ್)	ಬಾಹ್ಯ	ಅಭ್ಯರ್ಥಿ	50	"
9.	ಜೂನಿಯರ್ ಇಂಜಿನಿಯರ್ (ಎಲೆಕ್ಟ್ರಿಕಲ್)	ಬಾಹ್ಯ	ಅಭ್ಯರ್ಥಿ	9	"
10.	ಜೂನಿಯರ್ ಇಂಜಿನಿಯರ್ (ಇಲೆಕ್ಟ್ರಿಕಲ್: ಮೆಕ್ಯಾನಿಕಲ್)	ಬಾಹ್ಯ	ಅಭ್ಯರ್ಥಿ	42	"
11.	ಕೆಮಿಕಲ್ ಸೂಪರ್‌ವೈಸರ್	ಆಂತರಿಕ	ನೇಮಕಾತಿ	09	1997
	ಒಟ್ಟು			**437**	

ಟಿಪ್ಪಣಿ : 1. ಈ ಹುದ್ದೆಗಳ ಪೈಕಿ 2,7 ಮತ್ತು 8 ರಲ್ಲಿನ 238 ಖಾಲಿ ಹುದ್ದೆಗಳನ್ನು ಚಾಲ್ತಿಗೊಳಿಸುತ್ತಿಲ್ಲ. ನಿಗಮವು 241 ಸಿವಿಲ್ ಇಂಜಿನೀಯರರನ್ನು ಹೊಂದಿರುತ್ತದೆ. ಪ್ರಸ್ತುತದಲ್ಲಿ ಹೊಸದಾಗಿ ಬೃಹತ್ ವಿದ್ಯುತ್ ಯೋಜನೆಗಳಿರುವುದಿಲ್ಲ. ಕೆಲವು ಮಂದಿ ಸಿವಿಲ್ ಇಂಜಿನಿಯರರನ್ನು ಇತರೆ ಸಂಸ್ಥೆಗಳಿಗೆ ನಿಯೋಜಿಸಿದೆ. ಆದ ಪ್ರಯುಕ್ತ ಸಿವಿಲ್ ಇಂಜಿನೀಯರರನ್ನು ನೇಮಕಾತಿ ಮಾಡುವ ಅವಶ್ಯಕತೆ ಇರುವುದಿಲ್ಲ. ಅದೇ ರೀತಿ ನಿಗಮದಲ್ಲಿ ಹೆಚ್ಚುವರಿ ಜಿಯಾಲಜಿಸ್ಟ್ಸ್, ಅವಶ್ಯಕತೆ ಇರುವುದಿಲ್ಲ.

2. ಒಟ್ಟಾರೆ ಕಾರ್ಪೊರೇಟ್ ವೃಂದದ ಖಾಲಿ ಹುದ್ದೆಗಳು -199 ಆದಾಗ್ಯೂ ಈ ಕೆಳಕಂಡ ಕಾರಣಗಳಿಂದ ಭರ್ತಿ ಪಡಿಸಲು ಉದ್ದೇಶಿಸಿರುವುದಿಲ್ಲ.

ಅ) ಹೊಸದಾಗಿ ಬೃಹತ್ ಯೋಜನೆಗಳಿರುವುದಿಲ್ಲ. ನಿಗಮವು ಕೈಗೆತ್ತಿಕೊಂಡಿರುವ ಯೋಜನೆಗಳ ಚಾಲನೆ ಮತ್ತು ನಿರ್ವಹಣೆಗೆ ಪ್ರಸ್ತುತ ಕಾರ್ಯಬಲವು ಸಾಕಾಗಿರುತ್ತದೆ.

ಆ) ಅವಶ್ಯಕತೆಗಿಂತ ಅಧಿಕವಿರುವ ಸಿಬ್ಬಂದಿಯನ್ನು ಉಪಯುಕ್ತವಾಗಿ ಕಾರ್ಯವಿರುವೆಡೆ ನಿಯುಕ್ತಿಗೊಳಿಸಲಾಗುತ್ತಿದೆ.

ಇ) ವಿದ್ಯಾರ್ಹತೆ ಹೊಂದಿರುವ ಭೂ ಸಂತ್ರಸ್ಥರನ್ನು ಟ್ರೈನೀದಾರರಾಗಿ ತೆಗೆದುಕೊಳ್ಳಲು ನಿಗಮವು ಅಧಿಸೂಚನೆ ನೀಡಿದೆ. ಈ ಅಧಿಸೂಚನೆ ಪ್ರಕಾರ (ಯಾವ ವಿದ್ಯುತ್) ಯೋಜನೆಗಳಿಗೆ ತಮ್ಮ ಭೂ ಒಡೆತನ ಕಳೆದುಕೊಂಡಿರುತ್ತಾರೋ) ಬಿ.ಇ. (ಸಿವಿಲ್, ಇಲೆಕ್ಟ್ರಿಕಲ್, ಮೆಕ್ಯಾನಿಕಲ್), ಎಂ.ಬಿ.ಎ. ಡಿಪ್ಲೋಮಾ (ಸಿವಿಲ್ : ಇಲೆಕ್ಟ್ರಿಕಲ್ : ಮೆಕ್ಯಾನಿಕಲ್ ಕಂಪ್ಯೂಟರ್ ಅಪ್ಲಿಕೇಷನ್) ವಿದ್ಯಾರ್ಹತೆ ಹೊಂದಿರುವ 30 ಮಂದಿ ಭೂ ಸಂತ್ರಸ್ಥರನ್ನು ಟ್ರೈನೀದಾರರಾಗಿ ತೆಗೆದುಕೊಳ್ಳಲು ಉದ್ದೇಶಿಸಿದೆ. ನಿಗಮದ ಅಧಿಸೂಚನೆಗನುಗುಣವಾಗಿ, ಅರ್ಜಿ ಸಲ್ಲಿಸಿದವರಿಂದ ಆಯ್ಕೆ ಕ್ರಮವು ಪ್ರಕ್ರಿಯೆಯಲ್ಲಿರುತ್ತದೆ. ಈ ಕ್ರಮವು ವಿದ್ಯುತ್ ಯೋಜನೆಯ ಕಾರ್ಯಗತಕ್ಕಾಗಿ ಭೂ ಒಡೆತನವನ್ನು ಕಳೆದು ಕೊಂಡಂತಹ ಕುಟುಂಬದ ಸದಸ್ಯರೊಬ್ಬರಿಗೆ ಮಾತ್ರ ಸೀಮಿತವಾಗಿರುತ್ತದೆ.

ಅನುಬಂಧ - ಎ2

ಕಾರ್ಮಿಕ ವೃಂದ

ಖಾಲಿ ಹುದ್ದೆಗಳು - ಕಾರ್ಮಿಕ ವೃಂದ - ದಿನಾಂಕ 30.9.2000 ರಲ್ಲಿದ್ದಂತೆ.

ಕ್ರ. ಸಂ.	ಹುದ್ದೆಗಳು	ಆಂತರಿಕ / ನೇಮಕಾತಿ ಉ.ವಿ. ಕಛೇರಿಯಿಂದ	ಒಟ್ಟು	ಎಂದಿನಿಂದ ಖಾಲಿ ಇದೆ
1.	ಸಹಾಯಕ ಟೀಚರ್ (ಟಿಸಿಹೆಚ್)	ಉದ್ಯೋಗ ವಿನಿಮಯಕೇಂದ್ರ	02	ಜುಲೈ - 1997
2.	ಅಸಿಸ್ಟೆಂಟ್ ಆಪರೇಟಿವ್ (ಕುಕ್)	ಉ.ವಿ.ಕೇಂ	02	ಏಪ್ರಿಲ್ ಮತ್ತು ನವೆಂಬರ್ 1998
3.	ಆಪರೇಟಿವ್ ಪ್ಲಂಬರ್ (ಸಿವಿಲ್)	ಆಂತರಿಕ ನೇಮಕಾತಿ	01	ಮಾರ್ಚ್ 1998
4.	ಆಪರೇಟಿವ್ (ಸಿವಿಲ್)	ಆ.ನೇ	04	ಮಾರ್ಚ್ 1998
5.	ಆಪರೇಟಿವ್ (ಎಲೆಕ್ಟ್ರಿಕಲ್)	ಆ.ನೇ	04	ಜೂನ್ 1999
6.	ಸೆಕ್ಯೂರಿಟಿ ಗಾರ್ಡ್	ಆ.ನೇ	03	ಜೂನ್ 1999
7.	ಬಾಯ್ಲರ್ ಅಟೆಂಡೆಂಟ್ ಗ್ರೇ 2	ಉ.ವಿ.ಕೇ	03	ಮೇ 1999
8.	ಬೆರಳಚ್ಚುಗಾರ	ಉ.ವಿ.ಕೇ.	05	ಜೂನ್ 1999
9.	ಸಹಾಯಕ (ಲೆಕ್ಕ)	ಉ.ವಿ.ಕೇ	06	ಜೂನ್ 1999
10.	ಲೋಕೋ ಡ್ರೈವರ್	ಉ.ವಿ.ಕೇ	03	ಜೂನ್ 1999
12.	ಡ್ರೈವರ್ ಕಮ್-ಪಂಪ್ ಆಪರೇಟರ್	ಆ.ನೇ	01	ಜೂನ್ 1999
13.	ಬಾಯಲರ್ ಅಟೆಂಡೆಂಟ್ ಗ್ರೇ 1	ಉ.ವಿ.ಕೇ.	05	ಜೂನ್ 1998
14.	ಆಪರೇಟಿವ್ (ಇನ್ಸ್ಟ್ರುಮೆಂಟ್ ಮೆಕ್ಯಾನಿಕ್)	ಆ.ನೇ.	06	ಜೂನ್ 1998
15.	ಅಸಿಸ್ಟೆಂಟ್ (ಲ್ಯಾಬ್ -ಮೆಡಿಕಲ್)	ಉ.ವಿ.ಕೇ.	02	ಜನವರಿ1999
16.	ಅಸಿಸ್ಟೆಂಟ್ (ಫಾರ್ಮಾ)	ಆ.ನೇ	01	ಜನವರಿ 1999 (ತರಬೇತಿಯಲ್ಲಿದ್ದಾರೆ)
17.	ಆಪರೇಟಿವ್ (ಮಲ್ಟಿಗ್ರಾಫ್)	ಆ.ನೇ	10	ಡಿಸೆಂಬರ್ 1999
18.	ಆಪರೇಟೀವ್ (ಸ್ವಾಗತಗಾರ) ಐಬಿ	ಆ.ನೇ	01	ಜೂನ್ 1999
19.	ಸೀ. ಅಸಿಸ್ಟೆಂಟ್ (ಟೀಚರ್) ಪಿಇ	ಆ.ನೇ	01	ನವೆಂಬರ್ 1998
20.	ಸೀ. ಹೆಲ್ತ್ ಇನ್ಸ್ಪೆಕ್ಟರ್	ಆ.ನೇ	02	1997 (ತರಬೇತಿಯಲ್ಲಿದ್ದಾರೆ)
21.	ಸ್ಟೆನೋಗ್ರಾಫರ್	ಆ.ನೇ	07	1993
22.	ಹೆಲ್ತ್ ಇನ್ಸ್ಪೆಕ್ಟರ್	ಆ.ನೇ	05	1997 (ತರಬೇತಿಯಲ್ಲಿದ್ದಾರೆ)
	ಒಟ್ಟು		76	

ಅನುಬಂಧ - ಬಿ1

ಕಾರ್ಪೊರೇಟ್ ವ್ಯಂದ

ಕಳೆದ 2 ವರ್ಷಗಳಲ್ಲಿ ತುಂಬಲಾದ ಹುದ್ದೆಗಳ ವಿವರಗಳು

ಕ್ರ. ಸಂ.	ಹುದ್ದೆ	ಸಂಖ್ಯೆ	ಆಯ್ಕೆ ಮಾಡಿದ ದಿನಾಂಕ	ಬಾಹ್ಯ : ಉ.ವಿ.ಕೇ: ಆಂತರಿಕ ಸೇವೆ	ಷರಾ
1.	ಜೂನಿಯರ್ ಇಂಜಿನಿಯರ್ (ಎಲೆಕ್ಟ್ರಿಕಲ್) ಕಾಯ್ದಿರಿಸಿದ ಪಟ್ಟಿ)	10	30.9.97	ಉ.ವಿ.ಕೇ	ಭೂ ಸಂತ್ರಸ್ಥ ಕೆ.ಹೆಚ್.ಇ.ವಿ-1 ಆರ್‌ಟಿಪಿ ಎಸ್-1
	ಜೂನಿಯರ್ ಇಂಜಿನೀಯರ್ ಎಲೆಕ್ಟ್ರಿಕಲ್)	02	18.12.97	ಆ.ಸೇ	-
	ಜೂನಿಯರ್ ಇಂಜಿನೀಯರ್ (ಎಲೆಕ್ಟ್ರಿಕಲ್)	02	12.7.99	ಉ.ವಿ.ಕೇ	-
2.	ಜೂನಿಯರ್ ಇಂಜಿನೀಯರ್ (ಮೆಕಾನಿಕಲ್) ಕಾಯ್ದಿರಿಸಿದ ಪಟ್ಟಿ)	17	30.9.97	ಉ.ವಿ.ಕೇ	ವಿ.ಹೆಚ್.ಇ.ವಿ-6 ಕೆ.ಹೆಚ್.ಇ.ಪಿ-2
	ಜೂನಿಯರ್ ಇಂಜಿನೀಯರ್ (ಮೆಕಾನಿಕಲ್)	1	12.7.99	ಉ.ವಿ.ಕೇ	
3.	ಜೂನಿಯರ್ ಇಂಜಿನೀಯರ್ (ಸಿವಿಲ್)	2	18.12.97	ಆ.ಸೇ	
4.	ಅಸಿಸ್ಟೆಂಟ್ ಇಂಜಿನೀಯರ್ (ಎಲೆಕ್ಟ್ರಿಕಲ್) (ಮುಖ್ಯ ಪಟ್ಟಿ)	20	18.12.98	-"-	ಬಾ.ಆ. ಕೆ.ಹೆಚ್.ಇ.ವಿ-1
	(ಕಾಯ್ದಿರಿಸಿದ ಪಟ್ಟಿ)	20	18.12.98	-"-	ಕೆ.ಹೆಚ್.ಇ.ವಿ-1
	ಅಸಿಸ್ಟೆಂಟ್ ಇಂಜಿನೀಯರ್ (ಎಲೆಕ್ಟ್ರಿಕಲ್)	2	26.5.98	ಆ.ಸೇ.ನೇ	ಕೆ.ಹೆಚ್.ಇ.ವಿ-1
5.	ಅಸಿಸ್ಟೆಂಟ್ ಇಂಜಿನೀಯರ್ (ಇನ್ಸ್ಟ್ರುಮೆಂಟ್‌ಷನ್) (ಮುಖ್ಯ ಪಟ್ಟಿ)	6.	8.6.98	ಬಾ.ಆ	
	(ಕಾಯ್ದಿರಿಸಿದ ಪಟ್ಟಿ)	6	8.6.98	-"-	
	ಅಸಿಸ್ಟೆಂಟ್ ಇಂಜಿನೀಯರ್ (ಇನ್ಸ್ಟ್ರುಮೆಂಟ್‌ಷನ್)				

1	2	3	4	5	6
	(ಮುಖ್ಯಪಟ್ಟಿ)	3	3.4.99	ಉ.ವಿ.ಕೇ	
	(ಕಾಯ್ದಿರಿಸಿದ)	3	3.4.99	-"-	
6.	ಅಸಿಸ್ಟೆಂಟ್ ಇಂಜಿನೀಯರ್ (ಮೆಕಾನಿಕಲ್) (ಮುಖ್ಯಪಟ್ಟಿ)	15	16.7.98	ಬಾ.ಅ	
	(ಕಾಯ್ದಿರಿಸಿ ಪಟ್ಟಿ)	15	10.7.98	-"-	ಆರ್.ಟಿ.ಪಿ.ಎಸ್-1
	ಅಸಿಸ್ಟೆಂಟ್ ಇಂಜಿನೀಯರ್ (ಮೆಕಾನಿಕಲ್)	3	9.4.99	ಆ.ಸೇ.ನೇ	
7.	ಜೂನಿಯರ್ ಪರ್ಸೊನ್ನೆಲ್ (ಆಫೀಸರ್) ಕಾಯ್ದಿರಿಸಿದ ಪಟ್ಟಿ	7	24.5.97	ಆ.ಸೇ.ನೇ	
8.	ಜೂನಿಯರ್ ಪಬ್ಲಿಕ್ ರಿಲೇಷನ್ ಆಫೀಸರ್ (ಮುಖ್ಯ ಪಟ್ಟಿ)	6	19.8.98	ಆ.ಸೇ.ನೇ	
	(ಕಾಯ್ದಿರಿಸಿದ ಪಟ್ಟಿ)	6	19.8.98	-"-	
9.	ಕೆಮಿಕಲ್ ಸೂಪರ್‌ವೈಸರ್	14	19.12.98	ಆ.ಸೇ.ನೇ	
10.	ಅಸಿಸ್ಟೆಂಟ್ ಕಂಪನಿ ಸೆಕ್ರೆಟರಿ	2	26.8.98	ಆ.ಸೇ.ನೇ	
11.	ಸಿಸ್ಪಮ್ ಅನಾಲಿಸ್ಟ್ (ಮುಖ್ಯ ಪಟ್ಟಿ)	2	22.6.99	ಬಾಹ್ಯ ಅಭ್ಯರ್ಥಿಗಳು	ಪ.ಜಾ:ಪ.ಪಂ ಅಭ್ಯರ್ಥಿಗಳ ವಿಶೇಷ ನೇಮಕಾತಿ
	ಸಿಸ್ಪಮ್ಸ್ ಅನಾಲಿಸ್ಟ್ (ಕಾಯ್ದಿರಿಸಿದ ಪಟ್ಟಿ)	2	22.6.99	ಬಾ.ಅ.	-"-
	ಒಟ್ಟು	**166**		**ಭೂ ಸಂತ್ರಸ್ಥರು -14**	

ಪಿ.ಹೆಚ್.ಇ.ಪಿ.	-	7
ಕೆ.ಹೆಚ್.ಇ.ಪಿ	-	5
ಆರ್.ಟಿ.ಪಿ.ಎಸ್	-	2

ಅನುಬಂಧ ಬಿ2 (ಕಾರ್ಮಿಕ ವ್ಯಂದ)

ಕಳೆದ 2 ವರ್ಷಗಳಲ್ಲಿ ತುಂಬಲಾದ ಹುದ್ದೆಗಳ ವಿವರಗಳು

ಕ್ರ. ಸಂ.	ಹುದ್ದೆ	ಸಂಖ್ಯೆ	ಆಯ್ಕೆ ಮಾಡಿದ ದಿನಾಂಕ	ಆಂತರಿಕ : ನೇಮಕಾತಿಕೆ ಉ.ವಿ.ಕೇ:	ಷರಾ
1.	ಬೆರಳಚ್ಚುಗಾರ	11	22.15.1998	ಆ.ನೇ	
2.	ಅಸಿಸ್ಟೆಂಟ್ ಟೀಚರ್ (ಆಂ.ಮಾ)	01	26.06.1998	ಉ.ವಿ.ಕೇ	
3.	ಅಸಿಸ್ಟೆಂಟ್ ಟೀಚರ್ (ಆಂ.ಮಾ)	08	12.11.1998	ಉ.ವಿ.ಕೇ	
4.	ಸೀ. ಅಸಿಸ್ಟೆಂಟ್ ಟೀಚರ್ (ಹಿಂದಿ)	02	17.07.1998	ಉ.ವಿ.ಕೇ	1-ಕಾಳಿ ಭೂ ಸಂತ್ರಸ್ಥ
5.	ಸೀ. ಅಸಿಸ್ಟೆಂಟ್ ಟೀಚರ್ (ವಿಜ್ಞಾನ)	02	18.12.1998	ಉ.ವಿ.ಕೇ	
6.	ಭದ್ರತಾ ಕಾವಲುಗಾರ	19	18.06.1998	ಆ.ನೇ	
7.	ಬಾಯ್ಲರ್ ಅಟೆಂಡೆಂಟ್ ಗ್ರೇ-1	02	12.02.1998	ಆ.ನೇ	
8.	ಅಸಿಸ್ಟೆಂಟ್ ಆಪರೇಟಿವ್ (ಕುಕ್)	01	19.08.1998	ಉ.ವಿ.ಕೇ	
9.	ಆಪರೇಟಿವ್ (ಸ್ವಾಗತಗಾರ) ಐಬಿ	09	27.07.1998	ಆ.ನೇ	
10.	ಬಾಯ್ಲರ್ ಅಟೆಂಡಂಟ್ ಗ್ರೇ -2	01	15.04.1998	ಆ.ನೇ	
11.	ಜ್ಯೂನಿಯರ್ ಹೆಲ್ಪರ್	26	22.04.1998	ನ್ಯಾಯಾಲಯದ ಆದೇಶದಂತೆ ಗುತ್ತಿಗೆ ಕಾರ್ಮಿಕರ ನೇಮಕಾತಿ	
12.	ಅಸಿಸ್ಟೆಂಟ್ ಆಪರೇಟಿವ್ (ಕುಕ್)	04	18.06.1999	ಉ.ವಿ.ಕೇ	1- ವರಾಹಿ ಭೂ ಸಂತ್ರಸ್ಥ
13.	ಅಸಿಸ್ಟೆಂಟ್ ಆಪರೇಟಿವ್ (ಕುಕ್)	01	22.06.1999	ಉ.ವಿ.ಕೇ	
14.	ಆಪರೇಟೀವ್ (ಬಡಿಗ)	03	18.05.1999	ಆ.ನೇ	
15.	ಆಪರೇಟಿವ್ (ಪ್ಲಂಬರ್)	03	18.05.1999	ಆ.ನೇ	
16.	ಬಾಯ್ಲರ್ ಅಟೆಂಡಂಟ್ ಗ್ರೇ -2	09	13.05.1999	ಉ.ವಿ.ಕೇ	
17.	ಆಪರೇಟಿವ್ (ಸಿವಿಲ್) ಮೇಸನ್	04	18.05.1999	ಆ.ನೇ	
18.	ಆಪರೇಟಿವ್ (ಎಲೆಕ್ಟ್ರಿಕಲ್)	58	05.05.1999	ಆ.ನೇ	
19.	ಅಸಿಸ್ಟೆಂಟ್ (ಅಡಳಿತ)	30	03.05.1999	ಆ.ನೇ	

1	2	3	4	5	6
20.	ಜ್ಯೂನಿಯರ್ ಅಸಿಸ್ಟೆಂಟ್	30	04.04.2000	ಆ.ಸೇ.	
21.	ಲೋಕೋ ಡ್ರೈವರ್	01	14.10.1999	ಆ.ಸೇ	
22.	ಸೀ. ಅಸಿಸ್ಟೆಂಟ್ ಟೀಚರ್ (ಕಲಾ)	05	04.12.1999	ಆ.ಸೇ.	
23.	ಸೀ. ಅಸಿಸ್ಟೆಂಟ್ ಟೀಚರ್ (ವಿಜ್ಞಾನ)	01	27.10.1999	ಉ.ವಿ.ಕೇ	
24.	ಅಸಿಸ್ಟೆಂಟ್ ಟೀಚರ್ (ದೈ.ಶಿ)	03	29.10.1999	ಉ.ವಿ.ಕೇ	1-ಕಾಳಿ ಭೂ ಸಂತ್ರಸ್ತ 1-ವರಾಹಿ ಭೂ ಸಂತ್ರಸ್ತ
	ಒಟ್ಟು	**234**◎			

◎ ಒಟ್ಟು 234 ತುಂಬಿದ ಹುದ್ದೆಗಳಲ್ಲಿ 202ರಷ್ಟನ್ನು ಆಂತರಿಕ ಅಭ್ಯರ್ಥಿಗಳಿಂದ ಮತ್ತು 32 ರಷ್ಟನ್ನು ಭೂಮಿ ಕಳೆದ ಉದ್ಯೋಗ ವಿನಿಮಯ ಕಛೇರಿಯಿಂದ ತುಂಬಲಾಗಿದೆ. ಈ 32ರಲ್ಲಿ 4 ಅಭ್ಯರ್ಥಿಗಳು ಭೂಮಿ ಕಳೆದುಕೊಂಡವರಾಗಿದ್ದು ಅವರಲ್ಲಿ ಇಬ್ಬರು ವರಾಹಿ ಮತ್ತು ಇಬ್ಬರು ಕಾಳಿ ಯೋಜನೆಯಲ್ಲಿ ಭೂಮಿ ಕಳೆದ ಕೊಂಡವರಾಗಿದ್ದಾರೆ.

ಶರಾವತಿ ಟೇಲ್ ರೇಸ್ ಅಣೆಕಟ್ಟಿನಿಂದ ಪರಿಸರಕ್ಕಾಗಿರುವ ಹಾನಿ

3210 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗೇರುಸೊಪ್ಪದಲ್ಲಿ ಶರಾವತಿ ಟೇಲ್ ರೇಸ್ ಅಣೆಕಟ್ಟು ನಿರ್ಮಾಣ ಮಾಡಿರುವ ಕರ್ನಾಟಕ ವಿದ್ಯುತ್ ನಿಗಮವು ಪರಿಸರಕ್ಕಾಗಿರುವ ಹಾನಿಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಪರಿಸರಕ್ಕಾಗಿರುವ ಹಾನಿಯನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

1) ಇಲ್ಲ.

2) ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಈ ಯೋಜನೆಗೆ ಅನುಮತಿ ನೀಡುವಾಗ ತಿಳಿಸಿರುವ ಸೂಚನೆ/ನಿಬಂಧನೆಗಳಂತೆ ಪರಿಸರ ಸಂರಕ್ಷಣ ಕಾರ್ಯಗಳನ್ನು ಕರ್ನಾಟಕ ವಿದ್ಯುತ್ ನಿಗಮವು ಕೈಗೊಂಡಿದೆ.